# ಚಿತ್ತ ಕೆತ್ತಿದ ಚಿತ್ರ

ಶ್ರುತಿ ಚೆಲ್ಲಾಳ ಧಾರವಾಡದವರು. ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ಸಂಶೋಧನಾ ವಿದ್ಯಾರ್ಥಿನಿ. 'ಇಲ್ಲಿ ಯಾವುದೂ ಯಃಕಶ್ಚಿತವಲ್ಲ' ಎಂಬ ವಿಮರ್ಶಾ ಸಂಕಲನ ಪ್ರಕಟಿಸಿದ್ದಾರೆ.

ನಾಯಿಗೆ ಕಾಡಿನ ಮರ್ಮ ತಿಳಿದಿದ್ದು ನಂತರದಲ್ಲಿ. ಇದು ಮೊದಮೊದಲು ಕೋವಿಯ ಶಬ್ದಕ್ಕೆ ಹೆದರುತ್ತಿತ್ತು. ಬೇಟೆಗೆ ಹೊರಟರೆ ಭಯಪಡುತ್ತಿದ್ದ ಟೈಗರ್‌ನನ್ನು ಪುಟ್ಟಣ್ಣ ಎಷ್ಟೋ ಬಾರಿ ಚೈನ್ ಕಟ್ಟಿ ಎಳೆದುಕೊಂಡು ಹೋದ ಸಂದರ್ಭಗಳು ಇವೆ. ಬೇರೊಂದು ನೆಲೆಯಿಂದ ಬಂದ ನಾಯಿ ಮಲೆನಾಡ ಸಂಸ್ಕೃತಿಯ ಭಾಗವಾಗುವ ಪರಿಯಲ್ಲಿ ಎಲ್ಲರ ಮೆಚ್ಚುಗೆಯ ನಾಯಿಯಾಯಿತು. ಅದಕ್ಕೆ ಪುಟ್ಟಣ್ಣನ ಟ್ರೈನಿಂಗೂ ಇತ್ತೆನ್ನಿ. ಇಂದು ತಮ್ಮ ಹೆತ್ತ ತಂದೆ ತಾಯಿಯರನ್ನೇ ತಮ್ಮ ಸ್ವತಂತ್ರ ಜೀವನಕ್ಕೆ ಅಡ್ಡಿಯಾಗಿರುವರೆಂದು ಮನೆ ಬಿಟ್ಟು ಹೊರಹಾಕುವ ಅಥವಾ ವೃದ್ಧಾಶ್ರಮಕ್ಕೆ ತಳ್ಳುವ ಸನ್ನಿವೇಶದಲ್ಲಿ ಪುಟ್ಟಣ್ಣನಂತಹವರು 'ಟೈಗರ್' ನಾಯಿ ಮೇಲೆ ತೋರುವ ಪ್ರೀತಿ, ಅದಕ್ಕೆ ಮಲೆನಾಡಿನ ಬದುಕನ್ನು ಕಲಿಸುವ ರೀತಿ ಹಾಗೂ ಅವರಿಬ್ಬರ ನಡುವೆ ಇದ್ದ ಜೀವ ಸಂಬಂಧವು ವಿಶೇಷ ಮಾದರಿಯಾಗಿ ನಿಲ್ಲುತ್ತದೆ.

ಪುಟ್ಟಣ್ಣ ಮತ್ತು ಟೈಗರ್ ನಾಯಿಯ ನಡುವಿನ ಸಂಬಂಧದ ಮೂಲಕ ಮಾನವ ಮತ್ತು ಪ್ರಾಣಿಗಳ ಮಧ್ಯವಿರುವ ಸಾಮ್ಯತೆ ಹಾಗೂ ಅದು ಪುಟ್ಟಣ್ಣನ ಬದುಕಿನಲ್ಲಿ ಹೇಗೆಲ್ಲಾ ಮಿಳಿತಗೊಂಡಿತ್ತು ಎಂಬ ಅಂಶವನ್ನು ಕುವೆಂಪು ತುಂಬಾ ಸ್ಪಷ್ಟವಾಗಿ ಕಟ್ಟಿಕೊಡುತ್ತಾರೆ. ಬೇಟೆಯ ವಿಷಯದಲ್ಲಿ ತುಂಬಾ ಚಾಣಾಕ್ಷವಾಗಿದ್ದ ಟೈಗರ್ ನಾಯಿ ಜಾಕಿಯೊಂದಿಗೆ ಹೋರಾಟ ನಡೆಸುವ ಪ್ರಸಂಗ ಬರುತ್ತದೆ. ಆದರೆ, ಅಲ್ಲಿ ಸಂಭವಿಸುವ ಹೋರಾಟದಲ್ಲಿ ಟೈಗರ್, ಪ್ರೀತಿಯ ಪುಟ್ಟಣ್ಣನನ್ನು ಬಿಟ್ಟು ಹೋಗುತ್ತದೆ. ಟೈಗರ್‌ನ ಸಾವು ಕೇವಲ ಪುಟ್ಟಣ್ಣನ ಹೃದಯದಲ್ಲಿ ಮಾತ್ರವಲ್ಲ, ಸಹೃದಯ ಓದುಗರಲ್ಲಿಯೂ ದುಃಖವನ್ನು ಮಡುಗಟ್ಟಿಸುತ್ತದೆ. ಪುಟ್ಟಣ್ಣ ಮತ್ತು ಟೈಗರ್ ಹಂದಿ ಬೇಟೆಗೆಂದು ಹೋಗಿದ್ದು, ತಮ್ಮ ಬೇಟೆಯನ್ನು ಬಚ್ಚಿಟ್ಟ ಜಾಕಿಯನ್ನು ಟೈಗರ್ ಏಕಚಿತ್ತವಾಗಿಯೇ ಗುರಾಯಿಸುತ್ತಿತ್ತು. ತನ್ನ ಒಡೆಯನ ಅನುಮತಿಗಾಗಿ ಕಾಯುತ್ತಾ ಕುಳಿತಿತ್ತು. ಸೇರೆಗಾರರು 'ಹಿಡಿ! ಟೈಗರ್! ಹಿಡಿ' ಎಂದು ಕೂಗಿದೊಡನೆಯೆ ಬಾಣದಂತೆ ಜಾಕಿಯ ಮೇಲೆ ಎರಗಿತು. ಜಾಕಿಯು ದೊಣ್ಣೆಯನ್ನು ಬಲವಾಗಿ ಬೀಸಿ, ಅದರ ತಲೆಗೆ ಹೊಡೆದಾಗ, ನಾಯಿ ಕೂಗಿಕೊಳ್ಳುತ್ತಲೇ ಕೆಳಗೆ ಬೀಳುತ್ತಾ, ಮೂರ್ಛೆ ಹೋಯಿತು. ಈ ಒಂದು ಕ್ಷಣದಿಂದ ದಿಗ್ಭ್ರಾಂತನಾದ ಪುಟ್ಟಣ್ಣ ಏನನ್ನು ಮಾಡದೇ ಸುಮ್ಮನೆ ನಿಂತನು. ಮಲೆನಾಡ ಸಂಸ್ಕೃತಿಯಲ್ಲಿ ನಾಯಿಯ ಮೇಲೆ ಪ್ರಾಣವನ್ನೇ ಇಟ್ಟುಕೊಂಡ ಪುಟ್ಟಣ್ಣನಂತಹವರಲ್ಲದೇ, ಜಾಕಿಯಂತಹ ದುಷ್ಟಬುದ್ಧಿಯ ವ್ಯಕ್ತಿಗಳು ಸಹ ಗೋಚರವಾಗುತ್ತಾರೆ. ಬೇಟೆಯಾಡುವ ನಾಯಿ ಕೊನೆಗೆ ಬೇಟೆಯಿಂದಲೇ ಅಂತ್ಯ ಕಾಣುತ್ತದೆ ಎಂಬ ಮಾತಿಗೆ ಟೈಗರ್‌ನ ಸಾವು ಸಾಕ್ಷಿಯಾಗುತ್ತದೆ.

ಟೈಗರ್‌ನನ್ನು ಸಾಕಿದ ಪುಟ್ಟಣ್ಣ ಅದರ ಸಾವಿನಿಂದ ಅನುಭವಿಸುವ ನೋವು ಎಂತಹವರನ್ನಾದರೂ ದುಃಖಿತರನ್ನಾಗಿಸುತ್ತದೆ. ಸತ್ತು ಬಿದ್ದ ಟೈಗರ್‌ನನ್ನು ಕಂಡಕೂಡಲೇ ಪುಟ್ಟಣ್ಣ ಜಾಕಿಯನ್ನು ಸಾಯಿಸಬೇಕೆಂದು ಕೂಗಾಡುತ್ತಾನೆ. ಇದು ಮಾನವನ ಸಹಜಗುಣ. ಟೈಗರ್ ಪ್ರಾಣದಿಂದ ಉಳಿದಿರಬಹುದೆಂಬ ಆಸೆಯಿಂದ ಅನೇಕ ರೀತಿಯ ಪ್ರಯತ್ನ ಮಾಡುತ್ತಾನೆ. ಅದರ ಬಾಯಿಗೆ ನೀರು ಹಾಕುವ ಸಂದರ್ಭ ಎಂಥ ಕಠೋರ ಮನಸ್ಥಿತಿಯ ಮನುಷ್ಯನನ್ನೂ ಮನಕರಗುವಂತೆ ಮಾಡಿಬಿಡುತ್ತದೆ.

'ತನ್ನವರು' ಎಂದುಕೊಂಡವರನ್ನು ಯಾರಾದರೂ ಅನಾಹುತದಿಂದ ಕೊಲೆ ಮಾಡಿದರೆ ಎಷ್ಟು ರೋಷ-ಕೋಪ ಹುಟ್ಟುತ್ತದೆಯೋ ಅದಕ್ಕಿಂತ ಹೆಚ್ಚಿನ ಕೋಪ ಪುಟ್ಟಣ್ಣನಲ್ಲಿ ಉಲ್ಬಣಗೊಂಡಿತ್ತು. ಅವನ ದೇಹದಲ್ಲಾದ ಬದಲಾವಣೆಗಳ ಮೂಲಕ ಈ ಸಿಟ್ಟು ಎಷ್ಟು ಕಠಿಣವಾದುದು ಎಂದು ಸೂಕ್ಷ್ಮವಾಗಿ ಕಂಡುಕೊಳ್ಳಬಹುದು. ಟೈಗರ್ ಅಂತ್ಯ ಸಂಸ್ಕಾರ ದೃಶ್ಯದಲ್ಲಿ ಪುಟ್ಟಣ್ಣ ಮತ್ತು ಬೈರಾ ಹಾಗೂ ಇತರೆ ನಾಯಿಗಳು ತೋರುವ ಮೌನ, ಟೈಗರ್ ಮೇಲಿದ್ದ ಅವರ ಪ್ರೀತಿ ಅಭಿಮಾನವನ್ನು ತೋರಿಸುತ್ತದೆ. ಹಗಲ